Unauthorised Cultivation of Lands.

*Q.—161. SRI S. KARIAPPA (Kanakapura).—

Will the Government be pleased to state :—

(*a*) the persons who have been unauthorisedly cultivating the lands in S. No. 629 of Harohalli Village, Kanakapura Taluk ;

(*b*) whether any person has been removing the bund in the said survey number ;

(*c*) whether any complaint has been received in that regard ;

(*d*) if so, the action taken thereon ;

(*e*) the number of unauthorised cultivators of land in the said number who have been served with notices of eviction ?

A.—SRI M. V. KRISHNAPPA (Minister for Revenue).—

(*a*) Two persons.

(*b*) Yes.

(*c*) Yes.

(*d*) The matter is under investigation.

(*e*) Two persons.

ಶ್ರೀ ಎಸ್. ಕರಿಯಪ್ಪ.—ಉತ್ತರದಲ್ಲಿ ಏರಿ ಒಡೆಯುತ್ತಿದ್ದಾರೆಂದು ಹೇಳಿದೆ, ಆ ಮನುಷ್ಯ ಯಾರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಯಾರು ಎಂಬುದು ಗೊತ್ತಿಲ್ಲ. ಇಬ್ಬರು ಅನ್-ಆಥರೈಜಾಗಿ ಅದನ್ನು ಮಾಡುತ್ತಿದ್ದಾರೆ. ಅವರು ಶ್ರೀ ರಾಮದೇವರುವಳ್ಳ ಮತ್ತು ಶ್ರೀ ಕೆಂಪನರಸಯ್ಯ ಎಂಬುವರು. ಅವರ ಪೈಕಿ ಯಾರೋ ಒಬ್ಬರು ಇರಬಹುದು.

ಶ್ರೀ ಎಸ್. ಕರಿಯಪ್ಪ.—ಏರಿ ಒಡೆಯುತ್ತಿದ್ದಾರೆಂದು ಸರ್ಕಾರಕ್ಕೆ ದೂರುಬಂದು ಎಷ್ಟು ದಿವಸ ಗಳಾದುವು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಗೊತ್ತಿಲ್ಲ, ಆ ವಿವರಗಳಿಲ್ಲ.

ಶ್ರೀ ಎಸ್. ಕರಿಯಪ್ಪ.—ಅವರು ಡಿ.ಸಿ.ಸಿ. ಸೆಕ್ರೆಟರಿಯಾಗಿರುವುದರಿಂದ ಅವರ ಹೆಸರನ್ನು ಇಲ್ಲಿ ಕೊಡದೆ ಇವರು ಮುಚ್ಚಿಟ್ಟುಕೊಂಡಿದ್ದಾರೆ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಏರಿ ಒಡೆದಂತಹ ಮನುಷ್ಯ ಯಾರಾದರೇನು, ಅಂತಹವರಮೇಲೂ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಈ ರೀತಿಯಲ್ಲಿ ಏರಿ ಹೊಡೆದದ್ದರಿಂದ ಏರಿ ಕೆಳಗೆ ಇರತಕ್ಕ ಜಮೀನುಗಳಮೇಲೆ ನೀರು ನುಗ್ಗಿ ಅಲ್ಲಿನ ಜಮೀನ್ದಾರರಿಗೆ ಸಾವಿರಾರು ರೂಪಾಯಿಗಳಷ್ಟು ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ದೂರುಗಳನ್ನೇನೋ ಕೊಟ್ಟಿದ್ದಾರೆ, ಅವು ಸರ್ಕಾರಕ್ಕೆ ಬಂದು ಎಷ್ಟು ದಿವಸ ಗಳಾದುವು ಎಂಬ ಬಗ್ಗೆ ನನ್ನಲ್ಲಿ ವಿವರಗಳಿಲ್ಲ. ಆ ವಿವರಗಳು ಮಾನ್ಯ ಸದಸ್ಯರಿಗೆ ಬೇಕಾದರೆ ತರಿಸಿ ಹೇಳುತ್ತೇನೆ. ಆದರೆ ಆ ಬಗ್ಗೆ ತನಿಖೆ ನಡೆಯುತ್ತಾ ಇದೆ.

ಶ್ರೀ ಬಿ. ಚನ್ನಬೈರೇಗೌಡ.—ಡಿ.ಸಿ.ಸಿ. ಸೆಕ್ರೆಟರಿ ಯಾರು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರೂ ಕೂಡ ಒಳ್ಳೆಯ ಕೆಲಸಕ್ಕೆ ಇಳಿದಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಡಿ.ಸಿ.ಸಿ. ಸೆಕ್ರೆಟರಿಗಳು ಯಾರು ? ಅವರೇನು ಡೆಪ್ಯುಟಿ ಕಮಿಷನರ್ ಆಥವಾ ಯಾರು ಎಂಬುದು ಅರ್ಥವಾಗಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಡಿ.ಸಿ.ಸಿ. ಅಂದರೆ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಎಂದರ್ಥ. ಡಿಸ್ಟ್ರಿಕ್ಟ್ ಸೆಂಟ್ರಲ್ ಕೊ-ಆಪರೇಟಿವ್ ಬ್ಯಾಂಕ್ ಎಂದೂ ಆಗುತ್ತದೆ. ಶ್ರೀ ಕರಿಯಪ್ಪನವರು ಹೇಳಿದಮೇಲೆ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿರಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಡಿ.ಸಿ.ಸಿ. ಸೆಕ್ರೆಟರಿಯವರಿಗೆ ಕೆರೆ ಏರಿ ಒಡೆಯುವ ಹಾಗೆ ಸೂಚನೆ ಕೊಟ್ಟಿರುವುದು ಯಾವ ಪಕ್ಷದವರು ? ಅವರೇನು ಪೊಲಿಟಿಕಲ್ ಪಾರ್ಟಿಯವರೋ ಅಥವಾ ಆ ಗುಂಪು ಯಾವುದು ?

(No answer.)

Distribution of Cement

*Q.—67. SRI S. RAJAGOPAL (K. G. F.).—

Will the Government be pleased to state :—

number and names of agents that are distributing cement to the public in Kolar District (Taluk-wise) ?

A.—SRI K. MALLAPPA (Minister for Industries and Commerce).—

Since cement has been de-controlled from 1st January 1966, any one can buy and sell cement and therefore there is no restriction on the agencies for dealing in cement.

SRI S. RAJAGOPAL.—May I know the total number of tons of cement allotted to the District quarterly or monthly and by whom ?

MR. SPEAKER.—Government has no right to allot to private parties. If the Hon'ble Minister has got the taluk-wise figures perior to de-control they may be furnished.

†SRI K. MALLAPPA.—The information is to be collected.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಿಮೆಂಟ್ ಡಿ-ಕಂಟ್ರೋಲ್ ಆಗುವುದಕ್ಕೆ ಮುಂಚೆ ಕೆಲವು ಆರ್ಡರ್‌ಗಳನ್ನು ಕಳುಹಿಸಿದ್ದರೂಕೂಡ ಆ ಆರ್ಡರ್‌ಗಳನ್ನು ಕಂಪೆನಿಯವರು ವಾಪಸ್ಸು ಕಳುಹಿಸಿ, ಈಗ ಹೆಚ್ಚಿನ ದರದಂತೆ ಕೂಡ ಬೇಕೆಂದು ಹೇಳಿರುವುದು ನಿಜವೇ ?

ಶ್ರೀ ಕೆ. ಮಲ್ಲಪ್ಪ.—ಅದು ನಿಜವಲ್ಲ. ಸಿಮೆಂಟ್ ಡೀಕಂಟ್ರೋಲ್ ಏನೋ ಆಗಿದೆ. ಆದರೆ ಈ ಆರ್ಡರ್ ಜಾರಿಮಾಡುವುದಕ್ಕೆ ಮುಂಚೆ ಇದ್ದಂತಹ ಆರ್ಡರ್‌ಗಳನ್ನು ವೆರಿಫೈಮಾಡಿ ಒಂದು ಪಟ್ಟಿಯನ್ನು ತಯಾರುಮಾಡಿ ಸಿಮೆಂಟನ್ನು ಯಾರು ಹಂಚುತ್ತಿದ್ದಾರೋ ಅವರಿಗೆ ಇದುವರಿಗೆ ಇತ್ಯರ್ಥವಾಗದೇ ಇರತಕ್ಕ ಆರ್ಡರ್‌ಗಳನ್ನೆಲ್ಲಾ ಕಳುಹಿಸಿದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ಸಿಮೆಂಟಿನ ನಿಯಂತ್ರಣವನ್ನು ಯಾವ ತಾರೀಖಿನಿಂದ ವಜಾ ಮಾಡಿದರು, ಮತ್ತು ಹಾಗೆ ಸಿಮೆಂಟಿಗಾಗಿ ಹಾಕಿದಂತಹ ಅಪ್ಲಿಕೇಷನ್‌ಗಳಿಗೂ ಸಿಮೆಂಟ್ ಕೊಡಬೇಕೆಂದು ಸಿಮೆಂಟ್ ಡೀಲರುಗಳಿಗೆ ಸರ್ಕಾರದವರು ಸೂಚನೆ ಕೊಡುವುದು ಉತ್ತಮವಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಆ ಅಪ್ಲಿಕೇಷನ್‌ಗಳನ್ನೆಲ್ಲಾ ಒಂದು ಲಿಸ್ಟ್‌ಮಾಡಿ ಅದಕ್ಕೆ ಸಂಬಂಧಪಟ್ಟವರಿಗೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ.—ಸಿಮೆಂಟನ್ನ ಡೀ-ಕಂಟ್ರೋಲ್‌ಮಾಡಿದ ಮೇಲೆ ಅದರ ಬೆಲೆ ಜಾಸ್ತಿಯಾಗಿದೆ. ಆದ್ದರಿಂದ ಸಿಮೆಂಟನ್ನು ಕಂಟ್ರೋಲ್ ರೇಟಿಗೆ ಮಾರುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಸಿಮೆಂಟಿನ ಬೆಲೆ ಜಾಸ್ತಿಯಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಮೊನ್ನೆ ತಾನೆ ಡೀ-ಕಂಟ್ರೋಲ್ ಆಗಿದೆ. ಹಂಚಿಕೆ ತೃಪ್ತಿಕರವಾಗಿದೆ. ಬೆಲೆಗಳು ಹಿಡಿತದಲ್ಲಿವೆ.